### ಪಶ್ಚಿಮ ಆಫ್ರಿಕಾದ 'ಘಾಣಾ'ದಲ್ಲಿ ಅಕ್ಟೋಬರ್ 3 ರಿಂದ 6ರ ವರೆಗೆ ನಡೆಯುವ

## ಅಂತರಾಷ್ಟ್ರೀಯ ಸಭಾಧ್ಯಕ್ಷರ ಸಮ್ಮೇಳನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಭಾಗಿ.



ಪಶ್ಚಿಮ ಆಫ್ರಿಕಾ ದೇಶದ ಗಿನಿಯಾಕೊಲ್ಲಿಯ ಕರಾವಳಿ ಪ್ರದೇಶದಲ್ಲಿನ ಘಾಣಾದಲ್ಲಿ 66ನೇ ಕಾಮನವೆಲ್ತ ಪಾರ್ಲಿಮೆಂಟ್ ಸಮ್ಮೇಳನ (ಸಿ.ಪಿ.ಸಿ) ಅಕ್ಟೋಬರ 3 ರಿಂದ 6ರ ವರೆಗೆ ನಡೆಯಲಿದೆ. ಕರ್ನಾಟಕದ ಪ್ರತಿನಿಧಿಯಾಗಿ ಸಭಾಪತಿ ಬಸವರಾಜ ಹೊರಟ್ಟಿಯವರು ಭಾಗವಹಿಸಲಿದ್ದಾರೆಂದು ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.

ಲೋಕಸಭಾ ಅಧ್ಯಕ್ಷರಾದ ಓಂ ಬಿರ್ಲಾರವರ ನೇತೃತ್ವದಲ್ಲಿ ದೇಶದ ವಿವಿಧ ರಾಜ್ಯಗಳ ಸಭಾಧ್ಯಕ್ಷರು, ಸಭಾಪತಿಗಳು, ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಪ್ರಜಾಪ್ರಭುತ್ವದ ಯಶಸ್ಸಿನಲ್ಲಿ ವಿಧಾನಮಂಡಲಗಳ, ಲೋಕಸಭೆಗಳ ಪಾತ್ರ ಕುರಿತು ಸುಧೀರ್ಘ ಚರ್ಚೆ ನಡೆಯಲಿದೆ.

ಅಕ್ಟೋಬರ 1 ರಂದು ಬೆಂಗಳೂರಿನಿಂದ ಹೊರಡಲಿರುವ ಸಭಾಪತಿ ಬಸವರಾಜ ಹೊರಟ್ಟಿಯವರು ಘಾಣಾದಲ್ಲಿ ನಡೆಯುಲಿರುವ ಮೂರು ದಿನಗಳ ಸಮ್ಮೇಳನದಲ್ಲಿ ಭಾಗವಹಿಸಿ ತಮ್ಮ 43 ವರ್ಷಗಳ ಸುಧೀರ್ಘ ಅನುಭವದ ಕುರಿತು ಪ್ರಜಾಪ್ರಭುತ್ವದ ಮಹತ್ವ, ವಿಧಾನಸಭೆ, ವಿಧಾನ ಪರಿಷತ್ತಿನ ಪಾತ್ರಗಳ ಕುರಿತು ಸಮ್ಮೇಳನದಲ್ಲಿ ವಿಷಯ ಮಂಡಿಸಲಿದ್ದಾರೆ. ಲೋಕ ಕಲ್ಯಾಣದಲ್ಲಿ ಜನಪ್ರತಿನಿಧಿಗಳ ಜವಾಬ್ದಾರಿ ಕುರಿತು ಬೆಳಕು ಚೆಲ್ಲಲಿದ್ದಾರೆ. ನಂತರ ದಿನಾಂಕ:9 ರಿಂದ 18ರ ವರೆಗೆ ಇಟಲಿ, ಸ್ವಿಡ್ಜರಲ್ಯಾಂಡ್, ಫ್ರಾನ್ಸ, ಲಂಡನ್ ದೇಶಗಳಿಗೆ ಭೇಟಿ ನೀಡಿ ಅಧ್ಯಯನ ಪ್ರವಾಸ ಕೈಗೊಂಡು ದಿನಾಂಕ:19 ರಂದು ಬೆಂಗಳೂರಿಗೆ ಹಿಂದಿರುಗಲಿದ್ದಾರೆಂದು ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.

### ಕಾಮನ್‌ವೆಲ್ತ್ ಪಾರ್ಲಿಮೆಂಟ್ ಸಮ್ಮೇಳನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯ

# ಇಂಧನ ಕೊರತೆ ನೀಗಿಸಲು ಪರಿಸರ ಕಾಳಜಿಯೊಂದೇ ದಾರಿ




■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ದಿನದಿಂದ ದಿನಕ್ಕೆ ಜಗತ್ತು ಬೆಳೆಯುತ್ತಿದೆ. ಮುಂದಿನ ದಿನಗಳಲ್ಲಿ ಇಂಧನ ಕೊರತೆಯನ್ನು ಅನುಭವಿಸುವ ಲಕ್ಷಣಗಳು ಈಗಾಗಲೇ ಕಾಣುತ್ತಿವೆ. ಇಂಧನ ಕೊರತೆ ನೀಗಿಸಲು ಹಾಗೂ ಮುಂದಿನ ಪೀಳಿಗೆ ಕ್ಷಮಿಸಬೇಕೆಂದರೆ ಪರಿಸರ ಕಾಳಜಿ ಒಂದೇ ಪರ್ಯಾಯ ಮಾರ್ಗ ಎಂದು ಸಭಾಪತಿ ಬಸವರಾಜ ಹೊರಟ್ಟಿಯವರು ಅಭಿಪ್ರಾಯಪಟ್ಟರು.

ಅವರು ಪಶ್ಚಿಮ ಆಫ್ರಿಕಾ ದೇಶದ ಅಕ್ರಾದಲ್ಲಿ ನಡೆದ 66ನೇ ಕಾಮನವೆಲ್ತ್ ಪಾರ್ಲಿಮೆಂಟ್ ಸಮ್ಮೇಳನ(ಸಿ.ಪಿ.ಸಿ) ದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿ 'ಇಂಧನ ಕೊರತೆ ನೀಗಿಸುವಲ್ಲಿ ಪರಿಸರದ ಪಾತ್ರ' ಕುರಿತು ವಿಷಯ ಮಂಡನೆ ಮಾಡಿ ಮಾತನಾಡಿದರು.

ಇಂಧನ ಮನುಷ್ಯನ ಅವಿಭಾಜ್ಯ ಅಂಗವಾಗಿದೆ. ಅತಿಯಾದ ಇಂಧನ ಬಳಕೆಯಿಂದ ಪರಿಸರದ ಮೇಲೆ, ಜನಸಾಮಾನ್ಯರ ಆರೋಗ್ಯದ ಮೇಲೆ ಸಾಕಷ್ಟು ದುಷ್ಪರಿಣಾಮ ಉಂಟಾಗುತ್ತಿವೆ. ಈ ಎಲ್ಲ ಸಂಗತಿಗಳ ಕುರಿತು ▸▸ 3ನೇ ಪುಟಕ್ಕೆ